ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 115 ಟೆಇಸಿ 2016

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:01-08-2016

ಇವರಿಂದ:-

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ)
ಬೆಂಗಳೂರು-560001.

ಇವರಿಗೆ:-

ಕುಲಪತಿಗಳು/ಉಪಕುಲಪತಿಗಳು
ಜೈನ್ ವಿಶ್ವವಿದ್ಯಾಲಯ,
ಸ್ಕೂಲ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ,
ಜಕ್ಕಸಂದ್ರ ಪೋಸ್ಟ್, ಕನಕಪುರ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ.

ಮಾನ್ಯರೇ,

ವಿಷಯ:- 2016-17 ನೇ ಸಾಲಿನ ಲ್ಯಾಟರಲ್ ಎಂಟ್ರಿ ಪ್ರವೇಶಾತಿ ಕುರಿತು.

>>><<<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2015-16ನೇ ಸಾಲಿನಲ್ಲಿ ತಮ್ಮ ವಿಶ್ವವಿದ್ಯಾಲಯವು ನೀಡಲ್ಪಟ್ಟ ಪದವಿ ತಾಂತ್ರಿಕ ಕೋರ್ಸುಗಳ ಒಟ್ಟಾರೆ ಇನ್‌ಟೇಕ್‌ಗೆ ಎಐಸಿಟಿಇ ನಿಯಮಾವಳಿ ಅನ್ವಯ ಶೇ.20ರಷ್ಟನ್ನು ಪರಿಗಣಿಸಿ ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ 2016-17ನೇ ಸಾಲಿನ ಸೀಟು ಮ್ಯಾಟ್ರಿಕ್ಸ್‌ನಲ್ಲಿ ಅಳವಡಿಸಿ ಅದರಂತೆ ಅಭ್ಯರ್ಥಿಗಳ ಹಂಚಿಕೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಮಾಡಲಾಗಿರುತ್ತದೆ. ಲ್ಯಾಟರಲ್ ಎಂಟ್ರಿ ಪ್ರವೇಶಾತಿಗೆ ಕಳೆದ ವರ್ಷದಲ್ಲಿ ನೀಡಲ್ಪಟ್ಟ ಇನ್‌ಟೇಕ್‌ನ ಅನ್ವಯ ಪ್ರಸ್ತುತ ವರ್ಷದಲ್ಲಿ ಮ್ಯಾಟ್ರಿಕ್ಸ್‌ನ್ನು ತಯಾರಿಸುವ ಕ್ರಮವು ಜಾರಿಯಲ್ಲಿರುತ್ತದೆ. ಅದರಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಹಂಚಿಕೆಗೊಂಡು ತಮ್ಮ ವಿಶ್ವವಿದ್ಯಾಲಯದಲ್ಲಿ ಪ್ರವೇಶಾತಿಯನ್ನು ಹೊಂದ ಬಯಸುವ ಅಭ್ಯರ್ಥಿಗಳ ಪ್ರವೇಶಾತಿಯನ್ನು ಮಾನ್ಯ ಮಾಡುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಎಸ್.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ)

1/8/16

## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 115 ಟಿಇಸಿ 2016

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:01-08-2016

ಇವರಿಂದ:-

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ)
ಬೆಂಗಳೂರು-560001.

ಇವರಿಗೆ:-

ಕಾರ್ಯನಿರ್ವಾಹಕ ನಿರ್ದೇಶಕರು,
ಕರ್ನಾಟಕ ಪರೀಕ್ಷಾ ಪ್ರಾಧಿಕಾರ,
ಮಲ್ಲೇಶ್ವರಂ, ಬೆಂಗಳೂರು

ಮಾನ್ಯರೇ,

ವಿಷಯ:- 2016-17 ನೇ ಸಾಲಿನ ಲ್ಯಾಟರಲ್ ಎಂಟ್ರಿ ಪ್ರವೇಶಾತಿ ಕುರಿತು.

ಉಲ್ಲೇಖ:- ಕು: ನವ್ಯ ಎನ್ ರವರ ದಿ:01-08-2016ರ ಮನವಿ

>>><<<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಮನವಿಯಲ್ಲಿ ಕು.ನವ್ಯ ಎನ್ ರವರು ಲ್ಯಾಟರಲ್ ಎಂಟ್ರಿ ಮುಖಾಂತರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಜೈನ್ ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿನ ಕಂಪ್ಯೂಟರ್ ಸೈನ್ಸ್ ವಿಭಾಗಕ್ಕೆ ಹಂಚಿಕೆಗೊಂಡಿದ್ದು, ಸದರಿಯವರು ಜೈನ್ ವಿಶ್ವವಿದ್ಯಾಲಯದಲ್ಲಿ ಪ್ರವೇಶಾತಿಗೆ ಹೋದ ಸಂದರ್ಭದಲ್ಲಿ ಸದರಿ ವಿಶ್ವವಿದ್ಯಾಲಯವು ಪ್ರಸ್ತುತ ವರ್ಷದ ಸೀಟು ಮ್ಯಾಟ್ರಿಕ್ಸ್‌ಗೆ ಪ್ರವೇಶಾತಿ ಕಲ್ಪಿಸುವಂತೆ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲವೆಂದು ತಿಳಿಸಿ ಪ್ರವೇಶಾತಿಯನ್ನು ನಿರಾಕರಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕು:ನವ್ಯ ಎನ್. ರವರಿಗೆ 2ನೇ ಸುತ್ತಿನಲ್ಲಿ ಸದರಿ ವಿಶ್ವವಿದ್ಯಾಲಯವನ್ನು ಹೊರತು ಪಡಿಸಿ ಸದರಿಯವರು ನೀಡಿರುವ ಆಪ್ಷನ್ ಎಂಟ್ರಿ ಅನ್ವಯ ಪ್ರವೇಶಾತಿಯನ್ನು ಕಲ್ಪಿಸುವಂತೆ ಹಾಗೂ ಜೈನ್ ವಿಶ್ವವಿದ್ಯಾಲಯಕ್ಕೆ ಸಂಬಂದಿಸಿದಂತೆ, 2016-17 ನೇ ಸಾಲಿನ ಲ್ಯಾಟರಲ್ ಎಂಟ್ರಿ ಪ್ರವೇಶಾತಿ ಪಡೆದ ಇತರೇ ಅಭ್ಯರ್ಥಿಗಳಿಗೂ ಸಹ ಮೇಲಿನ ಕ್ರಮವನ್ನು ಅನುಸರಿಸುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

2/8/16

ತಮ್ಮ ನಂಬುಗೆಯ

S. Venkatesh

(ಎಸ್.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ)

1/8/16

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 115 ಟಿಇಸಿ 16

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಬೆಂಗಳೂರು
ದಿನಾಂಕ: 05-08-2016

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು

ಇವರಿಗೆ:

The Registrar
Jain University
Jain Global Campus, 45th KM, NH-209
Jakkasandra Post, Kanakapura Taluk
Ramanagara District-562 112

ಮಾನ್ಯರೆ,

ವಿಷಯ: 2016-17 ನೇ ಸಾಲಿನ ಲ್ಯಾಟರಲ್ ಎಂಟ್ರಿ ಪ್ರವೇಶಾತಿ ಕುರಿತು
ಉಲ್ಲೇಖ: 1) ಸಮ ಸಂಖ್ಯೆಯ ಪತ್ರ ದಿನಾಂಕ: 01-08-2016
2) Lr No. JU/JR/KEA/2016-17/597, dt. 28-07-2016

2015-16 ನೇ ಸಾಲಿನಲ್ಲಿ ತಮ್ಮ ವಿಶ್ವವಿದ್ಯಾಲಯವು ನೀಡಲ್ಪಟ್ಟ ಪದವಿ ತಾಂತ್ರಿಕ ಕೋರ್ಸುಗಳ ಒಟ್ಟಾರೆ ಇನ್‌ಟೇಕ್‌ಗೆ ಎಐಸಿಟಿಇ ನಿಯಮಾವಳಿಯಂತೆ ಶೇಕಡ 20 ರಷ್ಟು ಪರಿಗಣಿಸಿ 2016-17 ನೇ ಸಾಲಿನ ಲ್ಯಾಟರಲ್ ಎಂಟ್ರಿ ಪ್ರವೇಶಾತಿಗಾಗಿ ಸೀಟ್ ಮ್ಯಾಟ್ರಿಕ್ಸ್ ನಲ್ಲಿ ಅಳವಡಿಸಿ, ಅದರಂತೆ ಮೆರಿಟ್ ಮತ್ತು ಮೀಸಲಾತಿ ಆಧಾರದ ಮೇಲೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಅರ್ಹ ವಿದ್ಯಾರ್ಥಿಗಳನ್ನು ತಮ್ಮ ಕಾಲೇಜಿಗೆ ಪ್ರವೇಶಾತಿಗೆ ಹಂಚಿಕೆ ಮಾಡಲಾಗಿದೆ. ಈ ರೀತಿಯ ಹಂಚಿಕೆ ಕ್ರಮವು ಇತರೇ ಕಾಲೇಜು / ವಿಶ್ವವಿದ್ಯಾಲಯಗಳಿಗೂ ಸಹ ಅನ್ವಯವಾಗಲಿದ್ದು ಅದರಂತೆ ಸೀಟ್ ಮ್ಯಾಟ್ರಿಕ್ಸ್ ತಯಾರಿಸುವ ಕ್ರಮವು ಜಾರಿಯಾಲ್ಲಿರುತ್ತದೆ. ಆದರೆ ಈ ರೀತಿ ತಮ್ಮ ಕಾಲೇಜಿಗೆ ಹಂಚಿಕೆ ಮಾಡಲ್ಪಟ್ಟ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ನಿರಾಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ರೀತಿಯ ಪ್ರವೇಶಾತಿಯನ್ನು ನಿರಾಕರಿಸದಂತೆ ಸಮ ಸಂಖ್ಯೆ ಪತ್ರದಲ್ಲಿ ತಮಗೆ ಈಗಾಗಲೇ ತಿಳಿಸಲಾಗಿದ್ದರೂ, ಈ ಪ್ರವೃತ್ತಿ ಮತ್ತೆ ಮುಂದುವರಿಯುತ್ತಿರುವುದು ಪಾಲಕರು ಸರ್ಕಾರದ ಗಮನಕ್ಕೆ ತಂದಿದ್ದು, ಸರ್ಕಾರವು ಇದನ್ನು ತೀವ್ರವಾಗಿ ಪರಿಗಣಿಸಿದೆ. ಈ ಹಿನ್ನೆಲೆಯಲ್ಲಿ, ಉಲ್ಲೇಖ (2) ರಲ್ಲಿನ ತಮ್ಮ ಕೋರಿಕೆಯಂತೆ 2016-17 ನೇ ಸಾಲಿನ ಸೀಟ್ ಮ್ಯಾಟ್ರಿಕ್ಸ್ ನಲ್ಲಿ ತಮ್ಮ ಕಾಲೇಜಿನ ಹೆಸರನ್ನು ಕೈಬಿಡುವ ಮನವಿಯನ್ನು ಸರ್ಕಾರವು ಪರಿಗಣಿಸಿರುವುದಿಲ್ಲವೆಂದು ತಿಳಿಸುತ್ತಾ, ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಮಾನ್ಯ ಮಾಡುವಂತೆ ತಮಗೆ ಮತ್ತೊಮ್ಮೆ ತಿಳಿಸಲಾಗಿದೆ. ಇದಕ್ಕೆ ತಪ್ಪಿದಲ್ಲಿ ತಮ್ಮ ಸಂಸ್ಥೆಯ ವಿರುದ್ಧ ನಿಯಮಾನುಸಾರದ ಕ್ರಮ ಜರುಗಿಸಲಾಗುವುದೆಂದು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ

S. Venkatesh

(ಎಸ್ ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ತಾಶಿ)

ಪ್ರತಿ: 1) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು
2) ಸರ್ಕಾರದ ಉಪ ಕಾರ್ಯದರ್ಶಿಗಳು (ವಿಶ್ವವಿದ್ಯಾಲಯಗಳು)